ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ, ಗುಬ್ಬಿ

ಸಿ.ಸಿ.ನಂ.1677/2024

| | | | |
|---|---|---|---|
| ಹೆಸರು | : | ಎ ಎನ್ ಧನಪಾಲಶೆಟ್ಟಿ | ಸಿ .ಡಬ್ಲ್ಯೂ :9 |
| ತಂದೆ ಹೆಸರು | : | ಎ ವಿ ನಾರಾಯಣಪ್ಪ | ಪಿ .ಡಬ್ಲ್ಯೂ :7 |
| ವಯಸ್ಸು | : | 50 ವರ್ಷ | |
| ಉದ್ಯೋಗ | : | ಮುಖ್ಯ ಪೇದೆ ಗುಬ್ಬಿ ಠಾಣೆ | |
| ವಾಸಸ್ಥಳ | : | ಗುಬ್ಬಿ | |

ಸಾಕ್ಷಿಯನ್ನು ದಿಃ 28-05-2025 ರಂದು ಕರೆಸಿ ಪ್ರಮಾಣವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆಃ ಸಹಾಯಕ ಸರಕಾರಿ ಅಭಿಯೋಜಕರಿಂದಃ

ಮಾರ್ಚ್ 2024 ರಿಂದ ಗುಬ್ಬಿ ಠಾಣೆಯಲ್ಲಿ ಮುಖ್ಯ ಪೇದೆಯಾಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ .

ನಿಪಿ -2 ರಲ್ಲಿ ಸಾಕ್ಷಿಯು ತಮ್ಮ ಸಹಿಯನ್ನು ಗುರುತಿಸಿದ್ದಾರೆ ಅದನ್ನು ನಿಪಿ -2 (ಸಿ ) ಎಂದು ಗುರುತಿಸಲಾಯಿತು.

ದಿಃ 06-07-2024 ರಂದು ಗುಬ್ಬಿಯ ತಾಲ್ಲೂಕು ಕಚೇರಿ ಆವರಣದಲ್ಲಿರುವ ಕಂದಾಯ ಶಾಖೆಯ ಕೊಠಡಿಯಲ್ಲಿರುವ ದ್ವಿತೀಯ ದರ್ಜೆ ಸಹಾಯಕರಾದ ಚಾಸಾ -3 ಮತ್ತು 4 ರವರ ಕ್ಯಾಬಿನ್ ನ ಮುಂಭಾಗದಲ್ಲಿ ಸಹಿ ಮಾಡಿದ್ದೇನೆ .

ಸದರಿ ದಿನದಂದು ಚಾಸಾ -21 ರವರು ಆರೋಪಿತರನ್ನು ಬಾಡಿ ವಾರೆಂಟ್ ನ ಆಧಾರದಲ್ಲಿ ಕರೆದುಕೊಂಡು ಬರುವಂತೆ ತಿಳಿಸಿ ನನ್ನನ್ನು ಮತ್ತು ಚಾಸಾ -10 ರವರನ್ನು ನೇಮಿಸಿದ್ದರು . ನಾವು ಚಿಕ್ಕಮಗಳೂರಿನ ಉಪ ಬಂಧಿಖಾನೆಗೆ ಹೋಗಿ ಆರೋಪಿತರನ್ನು ಸೂಕ್ತ ಬೆಂಗಾವಲಿನಲ್ಲಿ ಕರೆದುಕೊಂಡು ಬಂದು ಚಾಸಾ -21 ರವರ ಸಮಕ್ಷಮ ಹಾಜರುಪಡಿಸಿದೆವು . ಚಾಸಾ -21 ರವರ ಆದೇಶದ ಮೇರೆಗೆ ಆರೋಪಿತರನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿ ನಂತರ ಕೃತ್ಯ ಸ್ಥಳದಲ್ಲಿ ಮಹಜರಿಗೆಂದು ಗುಬ್ಬಿಯ ತಾಲ್ಲೂಕು ಕಚೇರಿ ಆವರಣದಲ್ಲಿರುವ ಕಂದಾಯ ಶಾಖೆಯ ಕೊಠಡಿ ಬಳಿಗೆ ಕರೆದುಕೊಂಡು ಹೋದೆವು. ಸಾಕ್ಷಿಯು ನ್ಯಾಯಾಲಯದಲ್ಲಿ ಹಾಜರಿರುವ ಆರೋಪಿತರನ್ನು ಗುರುತಿಸಿದ್ದಾರೆ . ಆ ದಿನ ಮಧ್ಯಾಹ್ನ 2.30 ರಿಂದ 3.10 ರವರೆಗೆ ಚಾಸಾ-1, 7 ಮತ್ತು 8 ರವರ ಸಮಕ್ಷಮ ಪಂಚನಾಮೆ ಮಾಡಲಾಗಿದೆ . ಆರೋಪಿತರು ಅದೇ ಸ್ಥಳದಲ್ಲಿ ಎರಡು ಪ್ರಿಂಟರ್ ಗಳನ್ನು ಕಳ್ಳತನ ಮಾಡಿ ತೆಗೆದುಕೊಂಡು ಹೋಗಿರುವುದಾಗಿ ತಿಳಿಸಿದ್ದರು .

ಪಾಟೀಸವಾಲು: ಆರೋಪಿ ಪರ ವಕೀಲರಿಂದಃ-

ನಾನು ಆರೋಪಿತರನ್ನು ಎಂದೂ ಸಹಾ ನೋಡಿಲ್ಲ , ಚಾಸಾ -10 ರವರೊಡನೆ ಹೋಗಿ ಆರೋಪಿತರನ್ನು ಕರೆತಂದಿದ್ದೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಹೇಳುವಂತೆ ಆರೋಪಿತರು ಅದೇ ಸ್ಥಳದಲ್ಲಿ ಎರಡು ಪ್ರಿಂಟರ್ ಗಳನ್ನು ಕಳ್ಳತನ ಮಾಡಿ ತೆಗೆದುಕೊಂಡು ಹೋಗಿದ್ದೇನೆ ಎಂದು ತಿಳಿಸಿಲ್ಲ , ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪಂಚನಾಮೆಗೆ ಠಾಣೆಯಲ್ಲಿಯೇ ಕುಳಿತು ಸಹಿ ಮಾಡಿದ್ದೇನೆ ಎಂದರೆ ಸರಿಯಲ್ಲ. ನಾನು ಮತ್ತು ನನ್ನ ಅಧಿಕಾರಿಗಳು ಸೇರಿ ಪ್ರಕರಣಕ್ಕಾಗಿ ಠಾಣೆಯಲ್ಲಿಯೇ ಕುಳಿತು ದಾಖಲೆಗಳನ್ನು ಸೃಷ್ಟಿಸಿದ್ದೇವೆ ಎಂದರೆ ಸರಿಯಲ್ಲ .

ಮರುವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓದಿ ಹೇಳಿ ಕೇಳಿದೆ , ಸರಿ ಇದೆ ಎಂದು ಒಪ್ಪಿದ್ದಾರೆ.

SD/-
(ಅನುಪಮ.ಡಿ )
ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ, ಗುಬ್ಬಿ.